ಹೇನು, ಸೀರುಗಳನ್ನು ಕೋತಿಗಳ ರೀತಿ ಹಿಡಿದು ಕುಕ್ಕುತ್ತಿದ್ದರು. ಈ ಕಾರ್ಯಕ್ರಮಗಳು ಬೆಳಗಿನ ಹೊತ್ತು ಎಲ್ಲರ ಮನೆಯಲ್ಲೂ ಸಾಮಾನ್ಯವಾಗಿ ಜಾರಿಯಲ್ಲಿರುತ್ತಿದ್ದವು. ಹಾಗಾಗಿ ಬಾಲ್ಯದಲ್ಲಿ ತಾಯಂದಿರ ಎಣ್ಣೆ ಹಚ್ಚುವ ಕಾರ್ಯಕ್ರಮಗಳಿಂದಾಗಿ ವಯಸ್ಸಾದರೂ ಕೆಲವರ ತಲೆಯಲ್ಲಿ ಕೂದಲು ಇನ್ನೂ ಉಳಿದಿದೆ. ವಯಸ್ಸಾಗಿಯೂ ಯಾರಿಗಾದರೂ ಈಗ ತಲೆಯಲ್ಲಿ ಜಾಸ್ತಿ ಕೂದಲಿದ್ದರೆ ಅದರ ಕ್ರೆಡಿಟ್ ಅವರವರ ತಾಯಂದಿರಿಗೆ ಸೇರಬೇಕು.

ಕೂದಲ ಕಥೆಯೇನು ಇಂದು ನಿನ್ನೆಯದಲ್ಲ, ಇದು ಪುರಾಣ ಕಾಲದಿಂದಲೂ ಇದೆ. ಕುಮಾರವ್ಯಾಸನು ಗದುಗಿನ ಭಾರತದಲ್ಲಿ ದ್ರೌಪದಿಯ ತಲೆಗೂದಲನ್ನು ಕರಿಮೋಡಕ್ಕೆ ಹೋಲಿಸುತ್ತಾನೆ. ಅಂತಹ ಕೇಶರಾಶಿಗೆ ದುಶ್ಶಾಸನನು ಕೈಹಾಕಿದ್ದಕ್ಕೆ ಕೌರವರ ಕಥೆ ಏನಾಯಿತು ಎಂದು ಎಲ್ಲರೂ ಬಲ್ಲರು. ಇನ್ನು ಚೆನ್ನಮಲ್ಲಿಕಾರ್ಜುನನ ಬಗ್ಗೆ ಅಗಾಧ ಪ್ರೇಮವಿರಿಸಿಕೊಂಡಿದ್ದ ಅಕ್ಕ ಮಹಾದೇವಿಯು, ಅವನನ್ನು ಸೇರಲಿರುವ ನನಗೆ ಐಹಿಕ ಬಂಧನಗಳು ಮತ್ತು ವಸ್ತ್ರಗಳ ಹಂಗೇಕೆ ಎಂದು ಉಟ್ಟಬಟ್ಟೆ ಕಿತ್ತೆಸೆದು ಮೈಯನ್ನು ತನ್ನ ನೀಳ ಕೇಶರಾಶಿಯಿಂದ ಮುಚ್ಚಿಕೊಂಡ ಕಥೆ ಎಲ್ಲರಿಗೂ ಗೊತ್ತು. ಶಿವನ ಜಡೆಯಿಂದ 'ಇಳಿದು ಬಾ ತಾಯಿ' ಎಂದು ಗಂಗೆಯನ್ನು ಪ್ರೀತಿಯಿಂದ ಕರೆಯುವ ಬೇಂದ್ರೆಯವರ ಪ್ರಖ್ಯಾತ ಕವಿತೆಯನ್ನು ಹಳೆಯ ಸಿನಿಮಾದಲ್ಲಿ ಅಳವಡಿಸಿದ್ದಾರೆ. ಅದೇ ರೀತಿ 'ಓಪನ್ ಹೇರ್ ಬಿಟ್ಕೊಂಡು ಕೂದಲು ಹಾರಾಡಿಸ್ಕೊಂಡು' ಎಂಬ ಇತ್ತೀಚಿನ ಸಿನಿಮಾ ಹಾಡಿನವರೆಗೆ ಕೂದಲ ಮಹಾತ್ಮೆ ಹರಡಿದೆ. ಸಿನಿಮಾದಲ್ಲಿ ನಾಯಕಿಯು ನಾಯಕನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ತಲೆಗೂದಲಲ್ಲಿ ನವಿರಾಗಿ ಕೈಯಾಡಿಸುತ್ತಾ (ಹಿತವಾಗಿ ಮಾಲಿಶ್ ಮಾಡುತ್ತಾ) ತನ್ನ ಬೇಡಿಕೆಗಳನ್ನು ಮಂಡಿಸುವುದು ಒಂದು ವಿಧವಾದರೆ, ತನ್ನ ಘಮ್ಮೆನ್ನುವ ನೀಳ ಕೇಶರಾಶಿಯಲ್ಲಿ ನಾಯಕನ ಮುಖವನ್ನು ಹುದುಗಿಸಿ ಪ್ರೇಕ್ಷಕರಿಗೆ ಕಾಣದಂತೆ ಮರೆಮಾಡಿ ಚುಂಬಿಸುವುದು ಮತ್ತೊಂದು ಬಗೆಯ ಪ್ರೀತಿಯ ಅಭಿವ್ಯಕ್ತಿ. ಹಿತವಾದ ತಲೆಯ ಮಾಲಿಶ್‌ಗೆ (ಅದರಲ್ಲೂ ಸುಂದರ ಯುವತಿಯ ಮಾಲಿಶ್‌ಗೆ) ಒಲಿಯದಿರುವ ಗಂಡಸರಾರಿದ್ದಾರೆ? ಕೆಲವೊಮ್ಮೆ ಜಗಳಗಳಲ್ಲಿ ಎದುರಾಳಿಯನ್ನು ಕೆಣಕಲು, ಕಾಳಗಕ್ಕೆ ಬರಲೊಪ್ಪದ ಶಾಂತಸ್ವರೂಪಿಯನ್ನು ಯುದ್ಧಕ್ಕೆ ಎಳೆಯಲು ಮತ್ತು ಎದುರಾಳಿಗೆ ಚಾಲೆಂಜ್ ಮಾಡಲು 'ನನ್ನ ಒಂದು ರೋಮವನ್ನೂ ನೀ ಕಿತ್ತುಕೊಳ್ಳಲಾರೆ' ಎಂದು ಹೇಳಿ ಎದುರಾಳಿಯ ಶಕ್ತಿಸಾಮರ್ಥ್ಯವನ್ನು ಗೇಲಿಮಾಡಿ, ಕಲಹದ ತೀವ್ರತೆಯನ್ನು ತಾರಕಕ್ಕೇರಿಸುತ್ತಾರೆ.

ಹರಿಯುವ ನದಿಯನ್ನು ಬೇಕಾದರೂ ನಿಲ್ಲಿಸಬಹುದು, ಬೆಟ್ಟದಿಂದ ಜಾರಿ ಕೆಳಗೆ ಬೀಳುತ್ತಿರುವ ಹೆಬ್ಬಂಡೆಯನ್ನು ಬೇಕಾದರೂ ಹಿಡಿದು

